UASB LIBRARY
Newspaper Clippings
Pg .1 Tuesday 23-03-2021 Jai Kisan



ತುಮಕೂರು ಹುಣಸೆಗೆ ಜಾಗತಿಕ ಮನ್ನಣೆ

• ಕೆ.ಜೆ.ಮರಿಯಪ್ಪ

ತುಮಕೂರು: ಹುಣಸೆ ಹಣ್ಣಿನ ಹೊಸ ತಳಿಯೊಂದನ್ನು ಗುರುತಿಸುವ ಮೂಲಕ ಜಿಲ್ಲೆಯ ಹುಣಸೆಗೆ ವಿಜ್ಞಾನಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ತಂದು ಕೊಟ್ಟಿದ್ದಾರೆ. ದೇಶದಲ್ಲಿ ಇದೇ ಮೊದಲ ಬಾರಿಗೆ ತಳಿ ಗುರುತಿಸಿ ಹೆಸರಿಸಲಾಗಿದೆ.

ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯು (ಐಸಿಎಆರ್) ತುಮಕೂರು ತಾಲ್ಲೂಕು ನಂದಿಹಳ್ಳಿ ಗ್ರಾಮದ ರೈತ ಲಕ್ಷ್ಮಣ ಅವರು ಬೆಳೆಸಿರುವ ಹುಣಸೆಯನ್ನು ಉತ್ಕೃಷ್ಟ ಗುಣಮಟ್ಟದ ತಳಿಯೆಂದು ಗುರುತಿಸಿದೆ. ರೈತ 'ಲಕ್ಷ್ಮಣ' ಅವರ ಹೆಸರನ್ನೇ ಈ ತಳಿಗೆ ನಾಮಕರಣ ಮಾಡಲಾಗಿದೆ.

ಜಿಲ್ಲೆಯಲ್ಲಿ ಸದಾ ಬರಕ್ಕೆ ತುತ್ತಾಗುವ ಪಾವಗಡ, ಮಧುಗಿರಿ, ಕೊರಟಗೆರೆ ತಾಲ್ಲೂಕಿನಲ್ಲಿ ದೊಡ್ಡ ಪ್ರಮಾ ಣದಲ್ಲಿ ಹುಣಸೆ ಬೆಳೆಸಲಾಗಿದೆ. ಶಿರಾ, ತುಮಕೂರು ಹಾಗೂ ಕಡಿಮೆ ಮಳೆಯಾಗುವ ಜಿಲ್ಲೆಯ ಇತರೆಡೆಯೂ ಬೆಳೆಯಲಾಗುತ್ತದೆ. ಒಂದು ಅಂದಾಜಿನ ಪ್ರಕಾರ ಜಿಲ್ಲೆಯಲ್ಲಿ ಹುಣಸೆ ಹಣ್ಣಿನಿಂದ ವರ್ಷಕ್ಕೆ ₹500 ಕೋಟಿಗೂ ಅಧಿಕ ವಹಿವಾಟು ನಡೆಯುತ್ತದೆ. ಶೇಂಗಾ ಹೊರತುಪಡಿಸಿದರೆ ಬರಪೀಡಿತ ಪ್ರದೇಶಗಳ ಜನರಿಗೆ ಆದಾಯ ತಂದುಕೊಡುವ ಏಕೈಕ ಬೆಳೆ ಹುಣಸೆ.

ಜಿಲ್ಲೆಯ ಹುಣಸೆಗೆ ಬ್ರ್ಯಾಂಡ್ ರೂಪ ತಂದುಕೊಟ್ಟರೆ, ಅದಕ್ಕೆ ಮಾರುಕಟ್ಟೆ ಸೃಷ್ಟಿಸಿ ರೈತರನ್ನು ಆರ್ಥಿಕವಾಗಿ ಇನ್ನಷ್ಟು ಮುಂದೆ ತರಬಹುದು ಎಂಬ ಗುರಿಯೊಂದಿಗೆ ಹೊಸ ತಳಿಗಳನ್ನು ಗುರುತಿಸುವ ಪ್ರಯತ್ನ ನಡೆದಿದೆ.

ಅಧ್ಯಯನ- ಮಾನದಂಡ: ತೋಟಗಾರಿಕಾ ಸಂಸ್ಥೆ ವಿಜ್ಞಾನಿಗಳು ಸತತವಾಗಿ ಮೂರು ವರ್ಷಗಳಿಂದ ಅಧ್ಯಯನ ನಡೆಸಿ 40 ವರ್ಷಗಳಷ್ಟು ಹಳೆಯದಾದ 'ಲಕ್ಷ್ಮಣ' ತಳಿಯನ್ನು ಗುರುತಿಸಿದ್ದಾರೆ. ಈ ಮರ ಪ್ರತಿ ವರ್ಷವೂ ಸಮ ಪ್ರಮಾಣದಲ್ಲಿ ಇಳುವರಿ ಕೊಡುತ್ತದೆ. ಹಣ್ಣಿನ ದಪ್ಪ, ಉದ್ದ, ಬಣ್ಣ, ತಿರುಳು, ಸ್ವಾದದಲ್ಲಿ ಇತರ ಹಣ್ಣಿಗಿಂತ ವಿಭಿನ್ನ, ವಿಶಿಷ್ಟವಾಗಿದೆ. 'ಲಕ್ಷ್ಮಣ' ಮರದಲ್ಲಿ ಸುಮಾರು 2.50 ಕ್ವಿಂಟಲ್ ಹಣ್ಣು ಸಿಕ್ಕರೆ, ಸಾಮಾನ್ಯ ತಳಿಯ ಮರದಲ್ಲಿ 1.50 ಕ್ವಿಂಟಲ್ ಸಿಗುತ್ತದೆ. ಇತರ ತಳಿಯ ಹಣ್ಣಿಗಿಂತ ಕ್ವಿಂಟಲ್‌ಗೆ ₹ 15 ಸಾವಿರದಿಂದ ₹ 20 ಸಾವಿರ ಅಧಿಕ ಬೆಲೆ ಇರುತ್ತದೆ. ಕಳೆದ ವರ್ಷ ಈ ಮರದಿಂದ ₹ 1 ಲಕ್ಷ ಆದಾಯ ಬಂದಿದೆ.

ಈ ಮರದ ರೈತನ ಜತೆಗೆ ತೋಟಗಾರಿಕಾ ಸಂಸ್ಥೆ ಒಪ್ಪಂದ ಮಾಡಿಕೊಂಡಿದ್ದು, ಶೀಘ್ರವೇ ಸಸಿಗಳನ್ನು ಬೆಳೆಸಿ ಮಾರಾಟ ಮಾಡಲಿದೆ. ಇದರಿಂದ ಬರುವ ಹಣದಲ್ಲಿ ಸ್ವಲ್ಪ ಭಾಗವನ್ನು ರೈತನಿಗೂ ಕೊಡಲಾಗುತ್ತದೆ.

'ಬೀಜ ಹಾಕಿ ಗಿಡ ಬೆಳೆಸಿದರೆ ತಾಯಿ ಮರದ ಮೂಲ ಗುಣ ಪೂರ್ಣ ಪ್ರಮಾಣದಲ್ಲಿ ಬರುವುದಿಲ್ಲ. ಕಸಿ ಮಾಡಿ ಬೆಳೆಸಿದರೆ ಮಾತ್ರ ತಾಯಿ ಗುಣ ಬರುತ್ತದೆ' ಎಂದು ತಜ್ಞರು ಹೇಳುತ್ತಾರೆ.



ಲಕ್ಷ್ಮಣ ಅವರ ಜಮೀನಿನಲ್ಲಿ ಹುಣಸೆ ಹಣ್ಣು ಪರಿಶೀಲಿಸಿದ ವಿಜ್ಞಾನಿಗಳು



3 ವರ್ಷ ಅಧ್ಯಯನ ನಡೆಸಿ ಹುಣಸೆ ಮರದ ವಿಶೇಷಗಳನ್ನು ಗುರುತಿಸಿ ರೈತರ ಹೆಸರಿನಲ್ಲೇ 'ಲಕ್ಷ್ಮಣ' ಎಂದು ನಾಮಕರಣ ಮಾಡಲಾಗಿದೆ.
ಜಿ. ಕರುಣಾಕರನ್, ನಿರ್ದೇಶಕ, ಐಸಿಎಆರ್ ತುಮಕೂರು

ಒಂದೇ ಬೀಜ ಆದರೂ ವ್ಯತ್ಯಾಸ

'ನೆಲಕ್ಕೆ ಒಂದೇ ಮರದ ಎರಡು ಹುಣಸೆ ಬೀಜ ಹಾಕಿದೆ. ಎರಡೂ ಬೆಳೆದಿವೆ. ಒಂದು ಸಾಮಾನ್ಯ ಪ್ರಮಾಣದಲ್ಲಿ ಹಣ್ಣು ಕೊಟ್ಟರೆ, ಮತ್ತೊಂದು ಉತ್ತಮ ಗುಣಮಟ್ಟದ ಹಣ್ಣು ಬಿಡುತ್ತಿದೆ. ಏಕೆ ವ್ಯತ್ಯಾಸವಾಯಿತು ಎಂಬುದು ಗೊತ್ತಿಲ್ಲ' ಎಂದು ರೈತ ಲಕ್ಷ್ಮಣ ಹೇಳುತ್ತಾರೆ.

ಮುಂಬೈ ಧಾರಣೆ

23-03-2021
Pv Pg 11

"Don't Believe in Luck, Believe in Hard Work"

UASB LIBRARY
Newspaper Clippings
Pg .2 Tuesday 23-3-2021 Jai Kisan



CCI cuts price of cotton as 'one-time' correction

Move to benefit textile industry

M. SOUNDARIYA PREETHA
COIMBATORE

The Cotton Corporation of India (CCI) on Monday reduced the selling price of cotton as a "one-time correction."

International cotton prices had risen almost 12% in the last two months and dropped at the same rate, said Pradeep Kumar Agarwal, CMD of CCI. "The CCI did not increase the prices to that extent. Since CCI prices went up only by about 2%, it has reduced the prices by [about] 2%," he said. The amount of reduction in prices differs according to the variety of cotton.

This nominal correction will give a stimulus to the textile industry as those who want to buy cotton can



do so now, he added.

A. Sakthivel, chairman of the Apparel Export Promotion Council, said cotton yarn prices had gone up steeply in the last 4 months. The move by the CCI was significant for the textile value chain, especially garment exporters, he said, appealing to textile mills to reduce yarn prices by ₹20 a kg as cotton prices had declined.

23-03-2021 Hindu Pg 12

For more information visit
University Library Website
Web - uasbagrilibindia.org
E-mail- librarian@uasbangalore.edu.in

ಬ್ಯಾಡಗಿ ಮಾರುಕಟ್ಟೆಗೆ 2.31 ಲಕ್ಷ ಮೆಣಸಿನಕಾಯಿ ಚೀಲ ಆವಕ



ಬ್ಯಾಡಗಿ: ಸೋಮವಾರ ಮಾರುಕಟ್ಟೆಗೆ ಆಗಮಿಸಿದ ಮೆಣಸಿನಕಾಯಿ ಚೀಲಗಳು.

ಬ್ಯಾಡಗಿ: ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಗೆ ಸೋಮವಾರ 2.31 ಲಕ್ಷ ಮೆಣಸಿನಕಾಯಿ ಚೀಲ ಆವಕವಾಗಿದ್ದು, ಗರಿಷ್ಠ ಏರಿಕೆ ಕಂಡು ಬಂದಿದೆ. ಮಾ.15ರಂದು 2.10 ಲಕ್ಷ 18 ರಂದು 2.19 ಲಕ್ಷ ಮೆಣಸಿನಕಾಯಿ ಚೀಲಗಳು ಆವಕವಾಗಿದ್ದವು. ವಾರದಿಂದ ವಾರಕ್ಕೆ ಆವಕದಲ್ಲಿ ಏರಿಕೆ ಕಂಡುಬರುತ್ತಿದ್ದು ಸೋಮವಾರ ಮಾರುಕಟ್ಟೆಗೆ ಆಗಮಿಸಿದ 2,31,314 ಮೆಣಸಿನಕಾಯಿ ಚೀಲಗಳು ಪ್ರಸಕ್ತದ ವರ್ಷ 2ನೇ ಅತೀ ಹೆಚ್ಚಿನ ಆವಕವೆನಿಸಿದೆ. ಇತ್ತೀಚೆಗೆ 2.49 ಲಕ್ಷ ಚೀಲ ದಾಖಲೆ ಆವಕ ವಾಗಿತ್ತು. ಅಲ್ಲದೇ ಸೋಮವಾರ ಮೂರು ತಳಿಗಳ ದರ ದಲ್ಲಿಯಾವುದೇ ವ್ಯತ್ಯಾಸ ಕಂಡು ಬರಲಿಲ್ಲ.

ಸೋಮವಾರದ ದರ: ಬ್ಯಾಡಗಿ ಕಡ್ಡಿತಳಿ ಪ್ರತಿ ಕ್ವಿಂಟಲ್‌ಗೆ ಕನಿಷ್ಠ 1010, ಗರಿಷ್ಠ 24209, ಮಾದರಿ11269 ದರಗಳಿಗೆ ಮಾರಾಟವಾದರೆ, ಡಬ್ಬಿ ತಳಿ ಕನಿಷ್ಠ 1489, ಗರಿಷ್ಠ 31.189, ಮಾದರಿ 14109 ಹಾಗೂ ಗುಂಟೂರ ತಳಿ ಕನಿಷ್ಠ 700, ಗರಿಷ್ಠ 10500, ಮಾದರಿ 4369 ರೂ. ಗಳಿಗೆ ಮಾರಾಟವಾಯಿತು.

23-03-2021 Uv Pg 06